**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:- ಶ್ರೀ ಶಿವಾನಂದ ಹೂಗಾರ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಬಾದಾಮಿ, ಮತ್ತಿತರರ ವಿರುದ್ಧ ಇಲಾಖಾ ವಿಚಾರಣೆಯ- ಅಂತಿಮ ದಂಡನಾದೇಶ.

ಓದಲಾಗಿದೆ: 1. ಮಾನ್ಯ ಉಪಲೋಕಾಯುಕ್ತರು, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರಡಿ ಸಲ್ಲಿಸಿರುವ ವರದಿಸಂಖ್ಯೆ:ಕಂಪ್ಲೇಂಟ್/ ಉಪಲೋಕ್/ಬಿಜಿಎಂ/2153/2015/ ಸನಿಕಾಸ-2, ದಿನಾಂಕ:22.07.2016

2. ಎ.ಆರ್.ಎಲ್.ಓ-2 ಇವರ ಅ.ಸ.ಪತ್ರ ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಬಿಜಿಎಂ/2153/2015/ ಎಆರ್‌ಎಲ್‌ಓ-2, ದಿನಾಂಕ: 06.08.2016.

3. ಸರ್ಕಾರದ ಸಮ ಸಂಖ್ಯೆಯ ಆದೇಶ ದಿನಾಂಕ:16.09.2016.

4. ಮಾನ್ಯ ಉಪ ಲೋಕಾಯುಕ್ತ ರವರ ವರದಿ ಸಂಖ್ಯೆ: ಉಪ ಲೋಕ್-1/ ಡಿಇ/398/2016/ಎಆರ್‌ಇ-10, ದಿನಾಂಕ:28.12.2017.

5. ಸಮ ಸಂಖ್ಯೆಯ 2ನೇ ಕಾರಣ ಕೇಳುವ ನೋಟೀಸ್ ದಿನಾಂಕ:11.04.2018.

6. ಶ್ರೀ ಜಗನ್ನಾಥ್.ಬಿ ಹೂಗಾರ್, ಸಹಾಯಕ ಯೋಜನಾಧಿಕಾರಿ (ಡಿ.ಆರ್.ಡಿ.ಎ). ಜಿಲ್ಲಾ ಪಂಚಾಯತ್, ಬಾಗಲಕೋಟೆ ಇವರ ರಕ್ಷಣಾ ಹೇಳಿಕೆ ದಿನಾಂಕ:25.05 2018.

****

**ಪ್ರಸ್ತಾವನೆ:**

ಶ್ರೀ ಸೋಮವ್ವ ಗಂಡ ಯಲ್ಲಪ್ಪ ತಳವಾರ್, ಇವರು ರೋಣ ತಾಲ್ಲೂಕಿನ ಅಸೂಟಿ ಗ್ರಾಮ ಪಂಚಾಯತಿಯಲ್ಲಿ ಬರುವ ಮಾಳವಾಡ್ ಗ್ರಾಮದ ತನ್ನ ಗಂಡನ ಹೆಸರಿನಲ್ಲಿ 2004-05ನೇ ಸಾಲಿನಲ್ಲಿ ಆಶ್ರಯ ಮನೆ ಪಡೆದುಕೊಂಡಿದ್ದು, ಸದರಿಯವರು ತಮ್ಮ ತವರು ಮನೆಯಾದ ಬಾದಾಮಿ ತಾಲ್ಲೂಕಿನ ಹಾಲಿಗೇರಿ ಗ್ರಾಮದಲ್ಲಿ ಸೋಮವ್ವ ತಂದೆ ರಾಮಪ್ಪ ಯರಗಟ್ಟಿ ಅಂತ ಹೆಸರಿನಲ್ಲಿ ಆಶ್ರಯ ಯೋಜನೆಯಲ್ಲಿ ಮನೆ ಪಡೆದಿರುತ್ತಾರೆಂದು, ಒಬ್ಬ ಹೆಣ್ಣುಮಗಳು ಕಾನೂನು ಬಾಹಿರವಾಗಿ ಸರ್ಕಾರದಿಂದ ಎರಡು ಭಾರಿ ಆಶ್ರಯ ಯೋಜನೆಯಲ್ಲಿ ಫಲಾನುಭವಿಯಾಗಿದ್ದು, ಇದಕ್ಕೆ ಈ ಕೆಳಕಂಡ ಅಧಿಕಾರಿ/ನೌಕರರು ಕಾರಣಕರ್ತರಾಗಿರುತ್ತಾರೆಂದು ಆರೋಪಿಸಿ, ಬಾದಾಮಿ ತಾಲ್ಲೂಕಿನ ಹಾಲಿಗೇರಿ ನಿವಾಸಿಯಾದ ಶ್ರೀ ಎಸ್.ಎಲ್.ದೇವರಮನಿ, ಇವರು ನೀಡಿದ್ದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9 ರನ್ವಯ ತನಿಖೆ ಕೈಗೊಳ್ಳಲಾಗಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಅಧಿಕಾರಿ/ನೌಕರರು ನೀಡಿರುವ ಲಿಖಿತ ರಕ್ಷಣಾ ಹೇಳಿಕೆಗಳು, ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ ಸಮಂಜಸವಾಗಿರುವುದಿಲ್ಲವೆಂದು, ಸದರಿಯವರುಗಳು ಸರ್ಕಾರಿ ನೌಕರರಾಗಿ ಸಂಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ, ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಸದರಿ 4

ಅಧಿಕಾರಿ/ನೌಕರರುಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಪ್ರಕರಣವನ್ನು ತಮಗೆ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ವಹಿಸುವಂತೆ, ಹಾಗೂ ಎದುರುದಾರರಲ್ಲಿ 2 ರವರಾದ ಶ್ರೀ ಎಲ್.ಹೆಚ್.ಪೂಜಾರ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ನೀರಬೂದಿಹಾಳ, ಬಾದಾಮಿ ತಾಲ್ಲೂಕು, ಇವರು ದಿನಾಂಕ: 31.07.2015 ರಂದು ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಿರುವುದರಿಂದ, ಇವರ ವಿರುದ್ಧ ಇಲಾಖಾ ವಿಚಾರಣೆ ಜರುಗಿಸಲು ಕೆ.ಸಿ.ಎಸ್.ಆರ್. ನಿಯಮ 214)2)(ಬಿ)(i) ರನ್ವಯ ಅನುಮತಿಯನ್ನು ನೀಡುವಂತೆ, ಮಾನ್ಯ ಉಪಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(3) ರನ್ವಯ, ಮೇಲೆ (1) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿದ್ದು, ಅದರಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ನಿಬಂಧಕರು ಕೋರಿದ್ದರ ಮೇರೆಗೆ, ಸದರಿ ನಾಲ್ಕು ಅಧಿಕಾರಿ / ನೌಕರರುಗಳು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರ ಹಿನ್ನಲೆಯಲ್ಲಿ ಸದರಿಯವರುಗಳ ವಿರುದ್ಧ, ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಾವಗಳಿಗಳ 1957 ರ ನಿಯಮ 11 ರನ್ವಯ ಶಿಸ್ತು ಕ್ರಮ ಜರುಗಿಸಲು, ಪ್ರಕರಣವನ್ನು ಮೇಲೆ (3) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮಾನ್ಯ ಉಪ ಲೋಕಾಯುಕ್ತರು-1 ರವರಿಗೆ ವಹಿಸಲಾಗಿತ್ತು.

| ಕ್ರಸಂ | ಅಧಿಕಾರಿಯ ಹೆಸರು ಮತ್ತು ಪದನಾಮ | ಎದುರುದಾರರ ಸಂಖ್ಯೆ: |
|---|---|---|
| 1. | ಶ್ರೀ ಎಸ್.ಪಿ.ಹಿರೇಮಠ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ನೀರಬೂದಿಹಾಳ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ. | 1 |
| 2. | ಶ್ರೀ ಎಲ್.ಹೆಚ್.ಪೂಜಾರ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ನೀರಬೂದಿಹಾಳ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ. | 2 |
| 3. | ಶ್ರೀ ಶಿವಾನಂದ ಹೂಗಾರ, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಬಾದಾಮಿ, ಬಾಗಲಕೋಟೆ ಜಿಲ್ಲೆ. | 3 |
| 4. | ಶ್ರೀ ಗೌಸ್ ಮೋಹಿದ್ದೀನ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅಸೂಟಿ ಗ್ರಾಮ ಪಂಚಾಯತಿ, ರೋಣ ತಾಲ್ಲೂಕು, ಗದಗ ಜಿಲ್ಲೆ. | 4 |

ದಿನಾಂಕ:16.09.2016ರ ಸರ್ಕಾರಿ ಆದೇಶವನ್ನಾಧರಿಸಿ ಸದರಿ ನಾಲ್ಕು ಅಧಿಕಾರಿ/ನೌಕರರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಜರುಗಿಸಲು, ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಅಪರ ನಿಬಂಧಕರು, ವಿಚಾರಣೆ-10 ಇವರನ್ನು ವಿಚಾರಣಾಧಿಕಾರಿಯಾನ್ನಾಗಿ, ಮಾನ್ಯ ಉಪ ಲೋಕಾಯುಕ್ತ ರವರು ನೇಮಿಸಿದ್ದರ

ಮೇರೆಗೆ, ಸದರಿ ನಾಲ್ಕು ಆರೋಪಿತರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಾವಳಿಗಳು 1957ರ ನಿಯಮ–11ರನ್ವಯ ವಿಚಾರಣೆಯನ್ನು ನಡೆಸಿ, ದಿನಾಂಕ:26.12.2017 ರಂದು ನೀಡಿರುವ ವಿಚಾರಣಾ ವರದಿಯಲ್ಲಿ ಆರೋಪಿತರುಗಳ ವಿರುದ್ಧ ಮಾಡಿರುವ ಆರೋಪಗಳು ಸಾಬೀತಾಗಿರುತ್ತವೆಂದು ಅಭಿಪ್ರಾಯಪಟ್ಟಿರುತ್ತಾರೆ. ಸದರಿ ವರದಿಯನ್ನಾಧರಿಸಿ, ಆರೋಪಿತ ಅಧಿಕಾರಿಗಳಿಗೆ ದಂಡನೆಯನ್ನು ವಿಧಿಸಲು ಮಾನ್ಯ ಉಪ ಲೋಕಾಯುಕ್ತ–1 ರವರು, ಮೇಲೆ (4) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತ ರವರ ಶಿಫಾರಸ್ಸು ಹಾಗೂ ವಿಚಾರಣಾ ವರದಿಯೊಂದಿಗೆ, ನಾಲ್ಕು ಆರೋಪಿತ ಅಧಿಕಾರಿ / ನೌಕರರುಗಳ ಪೈಕಿ, ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ) ಯ ವೃಂದ–ಎ (ಕಿರಿಯ ಶ್ರೇಣಿ) ಅಧಿಕಾರಿಯಾದ ಶ್ರೀ ಜಗನ್ನಾಥ್.ಬಿ ಹೂಗಾರ್ (ಲೋಕಾಯುಕ್ತರ ವರದಿಯಲ್ಲಿ ಅಧಿಕಾರಿಯ ಹೆಸರನ್ನು ಶಿವಾನಂದ ಹೂಗಾರ್ ಎಂದು ನಮೂದಿಸಲಾಗಿರುತ್ತದೆ) ಇವರಿಗೆ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಾವಳಿಗಳು 1957 ನಿಯಮ 11 (ಎ) ರನ್ವಯ 2ನೇ ಕಾರಣ ಕೇಳುವ ನೋಟೀಸ್‌ನ್ನು ಮೇಲೆ (5) ರಲ್ಲಿ ಓದಲಾದಂತೆ ಜಾರಿ ಮಾಡಲಾಗಿದ್ದು, ಇದಕ್ಕೆ ಆರೋಪಿತ ಅಧಿಕಾರಿಯು, ಮೇಲೆ (6) ರಲ್ಲಿ ಓದಲಾದಂತೆ ನೀಡಿರುವ ಲಿಖಿತ ರಕ್ಷಣಾ ಹೇಳಿಕೆಯಲ್ಲಿ ಈ ಕೆಳಕಂಡಂತೆ ನಿವೇದಿಸುತ್ತಾ, ತಮ್ಮ ವಿರುದ್ಧದ ಇಲಾಖಾ ವಿಚಾರಣೆಯನ್ನು ಕೈಬಿಡುವಂತೆ, ಕೋರಿರುತ್ತಾರೆ.

1. It is submitted that Panchayat Bagalkot and has worked as Executive Officer. Taluk Panchayat, Badami, of Badami Taluk of Bagalkot District from 01.10.2014 to 30.11.2015. It is submitted that this Delinquent Government Official No.3, in the above proceedings from the date of his appointment, till the date I have put in more than 30 years of continuous, uninterrupted service and I have discharged his duties sincerely, diligently and effectively to the satisfaction of my superiory and further I have maintained an unblemished record service.

2. It is submitted that the basically the complaint is politically motivated and there no involvement of Delinquent Government Official No.3 in selection of one Smt: Somavva D/o Ramappa Yeragatti as a beneficiary in the 2013-14 under Basava Housing Scheme showing her as resident of Malawad Village though she had already abtained a house during the year 2003-04 under Ashrya Scheme in Rona Taluk, Asuti Village as Smt.Somawwa W/o Yappalla Talawar. It is submitted that Delinquent Government Official No.3 i.e Sri.Jagannath.B.Hugar (by mistake it was mentioned as Sri.Shivanand Hoogar) in the above proceedfings presently working as Assistant Project Officer, Zilla Panchayat, Bagalkot, and has worked as Executive Officer, Taluk Panchayat,

badami, of Badami Taluk of Bagalkot District from 01.10.2014 to 30.11.2015.

3. It is submitted that I was not in charge of the Talukl Panchayat, Badami, when Smt. Somawwa D/o Ramappa Yeragatti selected as a beneficiary in the 2013-14 under Basava Housing Scheme more ever the Executive Officer of Respoective Taluk Panchayath has not empowered in the process of selection of the beneficiaries of the those scheme.

4. It is submitted that Executive Officer of Respective Taluk Panchayat is supervisiong the process of schemes, and the Executive Officer of respective Taluk Panchayat has no authority in the selection process of beneficiaries and allotment. It is submitted that the Executive Officer of respective Taluk Panchayat only monitoring the schemes.

5. In the General Body meeting of Niralakeri Gram Panchayat has selected the beneficiary i.e smt. Somawwa D/o Ramappa Yeragatti under the said scheme and based upon the documents furnished by the said beneficiary i.e smt. Somawwa D/o Ramappa Yeragatti and after taking of G.P.R.S Photograph of each stage of construction of the house fund from the Government was directly credited to the account of the said beneficiary.

6. At that time Delinquent Government Official No.3 was not working in the office of Taluk Panchayat, Badami when the beneficiary was selected.

7. Not involved in the process of selection of the above said beneficiary. It is submitted that Executive Officer of respective Taluk Panchayat is supervisiong and approving authority of the said schems and Executive Officer of respective Taluk Panchayat monitoring the she said schemes.

8. It is submitted that the complaint was lodged, Delinquent Government Official No.3 in the above proceedings has formed a team to ascertain the facts on an enquiry with the Asuti Gram Panchayat have clearly stated that the present beneficiary was not selected as beneficiary of Asuti Gram, Panchayath Malawad Village Ron Taluk gadeag Distric on that basis the third installment

amount was released on the bases of recommendation of concerned sub ordinate officials and based on the progress in construction work.

9. The Computer operator who was working with office of Niralakeri Gram Panchayat has been removed from the office of Niralakeri Gram Panchayat, since she is providing false information.

10. The complainant has filed the false complaint against Delinquent Government Official No.3 and other officials with a malafide intention with a ulterior motive to Cause harassment and to take revenge since, earlier the list prepared by the complainant i.e Sri.Siddappa S/o Lakshmappa Deveramani as a gram panchayat member selecting 172 beneficiaries under the Basava Housing Scheme Yojna was cancelled because the complaint was lodged by the son-in-law of Smt. Somavva Yaragatti against the selection of the list of the beneficiaries by accepting illegal gratification and favoritism, selecting the close relatives of the members and the said list of beneficiaries was proved that, the beneficiaries were the relatives of the gram panchayat members and also the beneficiaries were not entitled to be benefited under the scheme and hence, the list selected of 172 beneficiaries was cancelled by the Zilla panchayat and the concern authority.

ಆರೋಪಿತ ಅಧಿಕಾರಿಯು ನೀಡಿರುವ ಪ್ರತಿ ರಕ್ಷಣ ಹೇಳಿಕೆ, ವಿಚಾರಣಾ ಅಧಿಕಾರಿರವರ ವಿಚಾರಣಾ ವರದಿ ಹಾಗೂ ಲಭ್ಯವಿರುವ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಶ್ರೀಮತಿ ಸೋಮವ್ವ ಇವರು ಆಶ್ರಯ ಯೋಜನೆಯಡಿಯಲ್ಲಿ 2 ನಿವೇಶನಗಳನ್ನು / ಮನೆಗಳನ್ನು, ರೋಣ ತಾಲ್ಲೂಕು ಹಾಗೂ ಬಾದಾಮಿ ತಾಲ್ಲೂಕುಗಳಲ್ಲಿ ನಿಯಮ ಬಾಹೀರವಾಗಿ ಪಡೆದಿರುವುದು ಹಾಗೂ ಇದನ್ನು ತಡೆಯಲು ಆರೋಪಿತ ಅಧಿಕಾರಿಯು ವಿಫಲರಾಗಿರುವುದು, ಈ ಕೃತ್ಯಕ್ಕೆ ಆರೋಪಿತ ಅಧಿಕಾರಿಗಳು ಕಾರಣೀಕರ್ತರಾಗಿರುವುದು ಹಾಗೂ ಆರೋಪಿತ ಅಧಿಕಾರಿಗಳು ಕರ್ತವ್ಯ ಲೋಪವೆಸಗಿ ಕರ್ತವ್ಯ ನಿಷ್ಠೆ ತೋರದಿರುವುದು ಸಾಬೀತಾಗಿರುತ್ತದೆ. ಶ್ರೀ ಜಗನ್ನಾಥ್ ಬಿ ಹೂಗಾರ ನೀಡಿರುವ ಲಿಖಿತ ರಕ್ಷಣಾ ಹೇಳಿಕೆಯಲ್ಲಿನ ಅಂಶಗಳು, ಅವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕೈಬಿಡಲು ಸಕಾರಣ / ಸಮಂಜಸ / ತೃಪ್ತಿಕರವಾಗಿರುವುದಿಲ್ಲ. ಆದುದರಿಂದ ಆರೋಪಿತ ಅಧಿಕಾರಿಗೆ ಅವರು ಎಸಗಿರುವ ಕರ್ತವ್ಯ ಲೋಪದ ಸಂವಾದಿಯಾಗಿ ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 45 ವಿಸೇಬಿ 2018 ಬೆಂಗಳೂರು ದಿನಾಂಕ: 27.06.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಬಾದಾಮಿ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯಲ್ಲಿ ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ, ಪ್ರಸ್ತುತ ಬಾಗಲಕೋಟೆ

ಜಿಲ್ಲಾ ಪಂಚಾಯತ್‌ನ ಸಹಾಯಕ ಯೋಜನಾಧಿಕಾರಿ (ಡಿ.ಆರ್.ಡಿ.ಎ) ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ, ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆಯ) ವೃಂದ–ಎ (ಕಿರಿಯ ಶ್ರೇಣಿ) ಯ ಅಧಿಕಾರಿಯಾದ ಶ್ರೀ ಜಗನ್ನಾಥ್ ಬಿ ಹೂಗಾರ್ ಇವರಿಗೆ, ಪ್ರಸ್ತುತ ಕಾಲಿಕ ವೇತನ ಶ್ರೇಣಿಯಲ್ಲಿ ವೇತನವನ್ನು ಕೆಳಗಿನ 2 ಹಂತಗಳಿಗೆ (Reducing the pay in the time scale of pay by to lower stages with cumulative effect) ಸಂಚಿತ ಪರಿಣಾಮ ಸಹಿತವಾಗಿ ಕೆಳಗಿಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ**

27/6/18
( ಡಿ.ಜಿ. ವಿಜಯ್ )
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು–ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ,**

1) ಪ್ರಧಾನ ಮಹಾಲೇಖಪಾಲರು (ಎ ಅಂಡ್ ಇ) (ಬಿ ಮತ್ತು ಎಸ್.ಎಸ್.ಎ) (ಇ ಮತ್ತು ಆರ್.ಎಸ್.ಎ), ಕರ್ನಾಟಕ, ಬೆಂಗಳೂರು.
   2) ಮಾನ್ಯ ಉಪಲೋಕಾಯುಕ್ತರು–1 ಕರ್ನಾಟಕ ಲೋಕಾಯುಕ್ತ, ಬೆಂಗಳೂರು
   3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಬಾಗಲಕೋಟೆ.
4) ಶಿವಾನಂದ ಬಿ ಹೂಗಾರ ಸಹಾಯಕ ಯೋಜನಾಧಿಕಾರಿ (ಡಿ.ಆರ್.ಡಿ.ಎ), ಜಿಲ್ಲಾ ಪಂಚಾಯತ್, ಬಾಗಲಕೋಟೆ.

**ಪ್ರತಿ ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ–2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.